# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/Letter/1062./2026-27 ದಿನಾಂಕ:05.09.2026

ಜಿಲ್ಲಾ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ
__________________ ಜಿಲ್ಲೆ.

ಮಾನ್ಯರೆ,

ವಿಷಯ: - ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿಯವರ ಜಾತ್ರಾಮಹೋತ್ಸವದಲ್ಲಿ ಸೇವೆ ಸಲ್ಲಿಸಲು ರೋವರ್ಸ್ ಮತ್ತು ರೇಂಜರ್ಸ್‌ಗಳನ್ನು ನಿಯೋಜಿಸುವ ಕುರಿತು.

ಉಲ್ಲೇಖ :- 1. ಉಪವಿಭಾಗಧಿಕಾರಿಗಳ ಪತ್ರ ಸಂಖ್ಯೆ ಡಿಎಎಸ್(ಹಾಸನಾಂಬ)01/26-27 ದಿನಾಂಕ 03.08.2026

**************

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ ಮಾನ್ಯ ಆಡಳಿತಾಧಿಕಾರಿಗಳು, ಹಾಸನಾಂಬ ದೇವಾಲಯ ಹಾಗೂ ಉಪವಿಭಾಗಾಧಿಕಾರಿಗಳು ಹಾಸನ ಮತ್ತು ಜಿಲ್ಲಾ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಸನ ಜಿಲ್ಲೆಯವರು ವಿನಂತಿಸಿರುವಂತೆ ದಿನಾಂಕ 29.10.2026 ರಿಂದ 11.11.2026 ರವರೆಗೆ (14 ದಿನಗಳು) ನಡೆಯುವ ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಮಹೋತ್ಸವದಲ್ಲಿ ಹಗಲು-ರಾತ್ರಿ ಲಕ್ಷಾಂತರ ಭಕ್ತಾಧಿಗಳು ಆಗಮಿಸಲಿದ್ದು, ಹೀಗೆ ಆಗಮಿಸುವ ಭಕ್ತಾಧಿಗಳನ್ನು ಸರಧಿ ಸಾಲಿನಲ್ಲಿ ನಿಲ್ಲಿಸಲು, ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಮಾಡಲು ಮತ್ತು ಅಂಗವಿಕಲರು ಹಾಗೂ ವಯೋವೃದ್ಧರಿಗೆ ಹಾಸನಾಂಬ ದೇವಿಯ ದರ್ಶನ ಮಾಡಿಸುವ ಹಾಗೂ ಇನ್ನಿತರೆ ಸೇವೆಗಳನ್ನು ಸಲ್ಲಿಸಲು ರಾಜ್ಯಾದ್ಯಂತ ರೋವರ್ಸ್ ಮತ್ತು ರೇಂಜರ್ಸ್‌ಗಳನ್ನು ನಿಯೋಜಿಸಬೇಕಾಗಿರುವುದು.

ಆದುದರಿಂದ ಈ ಕೆಳಕಂಡಂತೆ 3 ಬ್ಯಾಚ್‌ಗಳಲ್ಲಿ ರೋವರ್ಸ್-ರೇಂಜರ್ಸ್‌ಗಳು ಸೇವೆ ಸಲ್ಲಿಸಬೇಕಾಗಿದ್ದು. ತಾವು ತಮ್ಮ ಜಿಲ್ಲೆಗೆ ನಿಗಧಿಪಡಿಸಿರುವ ಕೋಟಾದನ್ವಯ ಅರ್ಹ ರೋವರ್ಸ್-ರೇಂಜರ್ಸ್‌ಗಳನ್ನು ಸ್ಕೌಟ್-ಗೈಡ್ ಸಮವಸ್ತ್ರ & ಟ್ರಕ್ಕಿಂಗ್ ಶೂನೊಂದಿಗೆ ಕಡ್ಡಾಯವಾಗಿ ನಿಯೋಜಿಸಬೇಕಾಗಿ ಕೋರಲಾಗಿದೆ. **ತಮ್ಮ ಜಿಲ್ಲೆಯಲ್ಲಿ ಯುವ ಆಪದ್ ಮಿತ್ರ ಯೋಜನೆಯ ಅಡಿಯಲ್ಲಿ ವಿಪತ್ತು ನಿರ್ವಹಣಾ ತರಬೇತಿ ಪಡೆದಿರುವ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಮೊದಲ ಆದ್ಯತೆ ನೀಡಿ, ಹಾಸನಾಂಬ ಜಾತ್ರಮಹೋತ್ಸವದಲ್ಲಿ ಸೇವೆ ಸಲ್ಲಿಸಲು ನಿಯೋಜಿಸುವುದು.**

| ಬ್ಯಾಚ್ | ದಿನಾಂಕ | ವರದಿ ಮಾಡಿಕೊಳ್ಳುವ ದಿನಾಂಕ ಮತ್ತು ಸ್ಥಳ | ಭಾಗವಹಿಸುವ ಜಿಲ್ಲೆಗಳು ಮತ್ತು ನಿಗಧಿ ಪಡಿಸಿರುವ ಕೋಟಾ | ಬಿಡುಗಡೆಗೊಳಿಸುವ ದಿನಾಂಕ |
|---|---|---|---|---|
| ಮೊದಲನೇ ಬ್ಯಾಚ್ | 29-10-2026 ರಿಂದ 2-11-2026 | 29.10.2026ರಂದು ಬೆಳಗ್ಗೆ 10.00 ಗಂಟೆ ಒಳಗೆ ಜಿಲ್ಲಾ ಸಂಸ್ಥೆ, ಹಾಸನ | ಹಾಸನ – 100 ರೋವರ್ಸ್ + 100 ರೇಂಜರ್ಸ್.<br><br>**ಈ ಕೆಳಕಂಡ ಪ್ರತಿ ಜಿಲ್ಲೆಗಳು 50 ರೋವರ್ಸ್ ಮತ್ತು 50 ರೇಂಜರ್ಸ್‌ಗಳಂತೆ ಒಟ್ಟು 100 ಸಂಖ್ಯೆಯಲ್ಲಿ ನಿಯೋಜಿಸುವುದು.**<br><br>ಚಿತ್ರದುರ್ಗ, ಶಿವಮೊಗ್ಗ, ಗದಗ, ದಾವಣಗೆರೆ, ಚಾಮರಾಜನಗರ, ಬಾಗಲಕೋಟೆ ಚಿಕ್ಕಮಗಳೂರು, ಕಲಬುರಗಿ, ಬೀದರ. | 2-11-2026 ಸಂಜೆ 6.00 ಗಂಟೆಗೆ |

| | | | | |
|---|---|---|---|---|
| ಎರಡನೇ ಬ್ಯಾಚ್ | 02-11-2026 ರಿಂದ 07-11-2026 | 02.11.2026ರಂದು ಬೆಳಗ್ಗೆ 10.00 ಗಂಟೆ ಒಳಗೆ ಜಿಲ್ಲಾ ಸಂಸ್ಥೆ, ಹಾಸನ | ಹಾಸನ – 100 ರೋವರ್ಸ್ + 100 ರೇಂಜರ್ಸ್.<br><br>**ಈ ಕೆಳಕಂಡ ಪ್ರತಿ ಜಿಲ್ಲೆಗಳು 50 ರೋವರ್ಸ್ ಮತ್ತು 50 ರೇಂಜರ್ಸ್‌ಗಳಂತೆ ಒಟ್ಟು 100 ಸಂಖ್ಯೆಯಲ್ಲಿ ನಿಯೋಜಿಸುವುದು**.<br><br>ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಕೊಡಗು ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಬೆಂಗಳೂರು ಗ್ರಾಮಾಂತರ, ಬೆಂಗಳೂರು ಪೂರ್ವ, ರಾಮನಗರ, ಕೋಲಾರ, ಕೊಪ್ಪಳ, ವಿಜಯನಗರ. | 07-11-2026 ಸಂಜೆ 6.0 ಗಂಟೆಗೆ |
| ಮೂರನೇ ಬ್ಯಾಚ್ | 7-11-2026 ರಿಂದ 11-11-2026 | 7.11.2026ರಂದು ಬೆಳಗ್ಗೆ 10.00 ಗಂಟೆ ಒಳಗೆ ಜಿಲ್ಲಾ ಸಂಸ್ಥೆ, ಹಾಸನ | ಹಾಸನ – 100 ರೋವರ್ಸ್ + 100 ರೇಂಜರ್ಸ್.<br><br>**ಈ ಕೆಳಕಂಡ ಪ್ರತಿ ಜಿಲ್ಲೆಗಳು 50 ರೋವರ್ಸ್ ಮತ್ತು 50 ರೇಂಜರ್ಸ್‌ಗಳಂತೆ ಒಟ್ಟು 100 ಸಂಖ್ಯೆಯಲ್ಲಿ ನಿಯೋಜಿಸುವುದು**.<br><br>ಹಾವೇರಿ, ಧಾರವಾಡ, ಬೆಳಗಾವಿ, ಕಾರವಾರ, ಶಿರಸಿ, ವಿಜಯಪುರ, ಮಂಡ್ಯ, ಚಿಕ್ಕಬಳ್ಳಾಪುರ, ಬಳ್ಳಾರಿ, ರಾಯಚೂರು, ಯಾದಗಿರಿ, ತುಮಕೂರು. | 11-11-2026 ಮಧ್ಯಾಹ್ನದ ನಂತರ |

ತಮ್ಮ ಜಿಲ್ಲೆಗೆ ನೀಡಿರುವ ದಿನಾಂಕಗಳಿಗೆ ನಿಗಧಿಪಡಿಸಿರುವ ಕೋಟಾದನ್ವಯ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಲು ರೋವರ್ಸ್-ರೇಂಜರ್ಸ್‌ಗಳನ್ನು ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರು ನಿಯೋಜಿಸುವಲ್ಲಿ ಸೂಕ್ತ ಕ್ರಮ ವಹಿಸಲು ಕೋರಲಾಗಿದೆ. **ವಿಪತ್ತು ನಿರ್ವಹಣಾ ತರಬೇತಿ ಪಡೆದಿರುವ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಮೊದಲ ಆದ್ಯತೆ ನೀಡುವುದು**. ಸದರಿಯವರುಗಳಿಗೆ ಊಟ ಮತ್ತು ತಿಂಡಿಯ ವ್ಯವಸ್ಥೆಯನ್ನು ಜಿಲ್ಲಾಡಳಿತದ ಮತ್ತು ವಸತಿ ವ್ಯವಸ್ಥೆಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಹಾಸನ ಜಿಲ್ಲಾ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ.

ಭಾಗವಹಿಸುವ ರೋವರ್ಸ್-ರೇಂಜರ್ಸ್‌ಗಳಿಗೆ ಗುರುತಿನ ಚೀಟಿಗಳನ್ನು ನೀಡಲು, ಅವರ ಪಾಸ್‌ಪೋರ್ಟ್ ಸೈಜ್ ಸಮವಸ್ತ್ರದ 2 ಫೋಟೋ, ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ತೆಗೆದುಕೊಂಡು ಬರಲು, ಪೋಷಕರ ಮತ್ತು ಕಾಲೇಜು ಪ್ರಾಂಶುಪಾಲರ ಒಪ್ಪಿಗೆ ಪತ್ರ, ಮೆಡಿಕಲ್ ಸರ್ಟಿಫಿಕೇಟ್ ಹಾಗೂ ರೋವರ್ಸ್-ರೇಂಜರ್ಸ್ ಮತ್ತು ದಳನಾಯಕರಿಗೆ ಹೋಗಿ ಬರುವ ಪ್ರಯಾಣ ಭತ್ಯೆಯನ್ನು ಆಯಾಯ ಕಾಲೇಜುಗಳ ರೋವರ್-ರೇಂಜರ್ ನಿಧಿಯಿಂದ ಭರಿಸಲು ಸಂಬಂಧಪಟ್ಟ ಕಾಲೇಜುಗಳ ಮುಖ್ಯಸ್ಥರಿಗೆ ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವಂತೆ ತಿಳಿಸಿ ಕ್ರಮ ವಹಿಸುವುದು. ತಾವು ಮತ್ತು ತಮ್ಮ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಮತ್ತು ಸಂಘಟಕರು ತಮ್ಮ ಜಿಲ್ಲೆಗೆ ನೀಡಿರುವ ಕೋಟಾದಂತೆ ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸಿ, ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಮಹೋತ್ಸವವನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

ಕೆ. ಗಂಗಪ್ಪ ಗೌಡ
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ: ಎಎಸ್‌ಒಸಿ/ಡಿಒ/ಡಿ.ಒ.ಟಿ/ಎಸ್‌ಜಿವಿ/ಎಸ್‌ಜಿಎ, ಭಾ.ಸ್ಕೌ&ಗೈ